

# ಹಾರರ್ ಕತ್ತಿಯ ಮೇಲೆ ಹರಿತ ನಡಿಗೆ

**ಸಣ್ಣ ಅವಧಿಯಲ್ಲಿಯೇ ಒಂದು ಹಾರರ್ ಸಿನಿಮಾ ನೋಡಿದ ಅನುಭವ ಕೊಡುವ 'ಆಸ್ಕರ್ಸ್ ಬೆಲ್' ಕಿರುಚಿತ್ರ, ನಿರ್ವಹಣೆಯ ಕ್ರಮದಿಂದಲೇ ಗಮನ ಸೆಳೆಯುತ್ತದೆ.**

■ ಗೌರಿ

ಜನರು ಭಯವನ್ನು ಇಷ್ಟಪಡುತ್ತಾರೆ ಎನ್ನುವುದಕ್ಕೆ ಹಾರರ್ ಸಿನಿಮಾಗಳ ದೊಡ್ಡ ಸಂಪ್ರದಾಯವೇ ನಿದರ್ಶನ. ಆದರೆ ಹಾರರ್ ಸಿನಿಮಾಗಳನ್ನು ಮಾಡುವುದು ಸುಲಭವಂತೂ ಅಲ್ಲ. ಹೆದರಿಸುವ ಹೊಸ ಹೊಸ ದಾರಿಗಳನ್ನು ಹುಡುಕುವುದು ಸವಾಲೇ ಸರಿ. ಅದರಲ್ಲಿಯೂ ಕಿರುಚಿತ್ರದ ಸಣ್ಣ ಕ್ಯಾನ್ವಾಸ್‌ನಲ್ಲಿ ಪ್ರೇಕ್ಷಕರನ್ನು ಬೆಚ್ಚಿಬೀಳಿಸುವುದು ಇನ್ನೂ ಕಠಿಣ.

ಈ ಸವಾಲನ್ನು ಎದುರಿಸಿ ಗೆದ್ದಿರುವ ಕಿರುಚಿತ್ರ 'ಆಸ್ಕರ್ಸ್ ಬೆಲ್'. ಬರಿ ಹನ್ನೆರಡು ನಿಮಿಷಗಳ ಅವಧಿಯ ಈ ಕಿರುಚಿತ್ರ ನಮ್ಮನ್ನು ಹಲವು ಬಾರಿಬೆಚ್ಚಿ ಬೀಳಿಸುತ್ತದೆ. ಮೊದಲಿನಿಂದ ತುದಿಯವರೆಗೂ ಉಸಿರು ಬಿಗಿಹಿಡಿದು ನೋಡುವಂತೆ ಮಾಡುತ್ತದೆ. ಸಾಮಾನ್ಯವಾಗಿ ಹಾರರ್ ಸಿನಿಮಾಗಳಲ್ಲಿ ಸನ್ನಿವೇಶಗಳಷ್ಟೇ, ತಾಂತ್ರಿಕ ಗುಣಮಟ್ಟವೂ ಮುಖ್ಯಪಾತ್ರ ವಹಿಸುತ್ತದೆ. ಈ ಕಿರುಚಿತ್ರದಲ್ಲಿ ಆ ಎರಡೂ ಒಟ್ಟಾಗಿ ಮೇಳೈಸಿವೆ. ಹಾಗಾಗಿ ಒಂದು ಪೂರ್ಣಪ್ರಮಾಣದ ಹಾರರ್ ಸಿನಿಮಾ ನೋಡಿದ ಅನುಭವವನ್ನೇ ಈ ಕಿರುಚಿತ್ರ ಹನ್ನೆರಡು ನಿಮಿಷಗಳಲ್ಲಿ ನೀಡುತ್ತದೆ.

ಡಂಕನ್ ತನ್ನ ನೆಚ್ಚಿನ ನಾಯಿ ಆಸ್ಕರ್ ಜೊತೆಯಲ್ಲಿ ವಾರಾಂತ್ಯದಲ್ಲಿ ಕಾಡಿನ ಮಧ್ಯ ಫೈರ್ ಕ್ಯಾಂಪ್ ಮಾಡಲು ಬಂದಿದ್ದಾನೆ. ಜೊತೆಯಲ್ಲಿ ಆರೇಳು ವರ್ಷದ ಅವನ ಮಗನೂ ಇದ್ದಾನೆ. ಡೇರೆಯಲ್ಲಿ ಮಗನನ್ನು ಮಲಗಿಸಿ ಹೊರಗೆ ಬೆಂಕಿ ಹಾಕಿಕೊಂಡು ಚಳಿ ಕಾಯಿಸುತ್ತ ಕೂತವನ ಜೊತೆಗೆ ಇದ್ದ ಆಸ್ಕರ್ ಕಾಡಿನ ಕಡೆಗೆ ಓಡುತ್ತದೆ.

ಇಡೀ ಕಿರುಚಿತ್ರಗಳಲ್ಲಿ ಮುಖ್ಯಪಾತ್ರವಾದ ಡಂಕನ್‌ಗೆ ಒಂದೇ ಒಂದೂ ಸಂಭಾಷಣೆಯಿಲ್ಲ. ಅವನ ಪತ್ನಿಯ ಸಂಭಾಷಣೆ ಇದೆಯಾದರೂ ಅವಳು ತೆರೆಯ ಮೇಲೆ ಕಾಣಿಸಿಕೊಳ್ಳುವುದೇ ಇಲ್ಲ! ಆದರೆ ಅವಳ ಮಾತಿನಲ್ಲಿ ಡಂಕನ್‌ನ ದಾಂಪತ್ಯ ಜೀವನದಲ್ಲಿ ಬಿರುಕು ಮೂಡಿದೆ; ಅವನ ಹೆಂಡತಿ ಬೇಡಿಕೊಂಡರೂ ಕೇಳದೆ ಮಗುವನ್ನು ಫೈರ್ ಕ್ಯಾಂಪಿಗೆ ಕರೆದುಕೊಂಡು ಬಂದಿದ್ದಾನೆ ಎಂಬುದು ನಮಗೆ ತಿಳಿಯುತ್ತದೆ.

ಚಳಿ ಕಾಯಿಸುತ್ತಲೇ ಜೋಂಪು ಹತ್ತುವ ಡಂಕನ್‌ಗೆ ಏನೋ ಶಬ್ದವಾಗಿ ಬೆಚ್ಚಿ ಎಚ್ಚರವಾಗುತ್ತದೆ. ಸುತ್ತ ನೋಡಿದರೆ ಆಸ್ಕರ್ ಇಲ್ಲ. ಆಸ್ಕರ್‌ನ ಕುತ್ತಿಗೆಯ ಗೆಜ್ಜೆ ಸದ್ದು ಮಾತ್ರ ಎತ್ತೆತ್ತಲೋ ಕೇಳಿಸುತ್ತಿರುತ್ತದೆ. ಸುತ್ತಮುತ್ತಲೂ ದಟ್ಟ ಕಾಡು... ಆ ಕಾಡನ್ನು ನುಂಗಿರುವ ಕಾರಿರುಳು. ಡಂಕನ್‌ನ ನಾಯಿ ಕಾಣಿಸುತ್ತಿಲ್ಲ. ಸುತ್ತಲಿನ ಕಾಡೊಳಗಿಂದ ಅದರ ಗೆಜ್ಜೆ ಸದ್ದು ಮಾತ್ರ ಕೇಳಿಸುತ್ತಿದೆ.

ಇಲ್ಲಿಂದ ಮುಂದೆ ಈ ಚಿತ್ರ ನಮ್ಮನ್ನು ಕುರ್ಚಿಯ ತುದಿಯಿಂದ ಹಿಂದೆ ಸರಿಯಲು ಬಿಡುವುದೇ ಇಲ್ಲ. ಡಂಕನ್‌ನ ನಾಯಿಗೆ ಏನಾಯಿತು? ಡಂಕನ್‌ಗೆ ಎದುರಾಗುವ ಅಪಾಯ ಯಾವುದು? ಡೇರೆಯಲ್ಲಿ ಮಲಗಿರುವ ಅವನ ಮಗನಿಗೆ ಏನಾಗುತ್ತದೆ? ಹೀಗೆ ಸರಸರನೇ ಏಳುವ ಪ್ರಶ್ನೆಗಳಿಂದ ನಮ್ಮ ಮನಸ್ಸನ್ನು ಬಿಗಿಯಾಗಿ ಕಟ್ಟಿ ತನ್ನ ಥ್ರಿಲ್ಲರ್ ದಾರಿಯಲ್ಲಿ ಎಳೆದೊಯ್ಯುತ್ತಾರೆ ನಿರ್ದೇಶಕರು.

ಹಾಗೆ ನೋಡಿದರೆ ಈ ಸಿನಿಮಾದ ವೈಶಿಷ್ಟ್ಯ ಇರುವುದು ಕಥೆಯಲ್ಲಲ್ಲ. ಬದಲಾಗಿ ನಿರ್ವಹಣೆಯಲ್ಲಿ. ರಾತ್ರಿಯ ಅಸ್ಪಷ್ಟ ಬೆಳಕಿನಲ್ಲಿ ಭಯಗೊಂಡ ಕಣ್ಣುಗಳ ಹಾಗೇ ಓಡಾಡುವ ಕ್ಯಾಮೆರಾ, ನೀರವತೆಯ ಭೀತಿ ಹೆಚ್ಚಿಸುವ, ಒಮ್ಮಿಂದೊಮ್ಮೆಲೇ ಬೆಚ್ಚಿಬೀಳಿಸುವ ಧ್ವನಿ ವಿನ್ಯಾಸ, ಕತ್ತಿಯಂಚಿನಷ್ಟು ಹರಿತವಾಗಿ ಚಿತ್ರವನ್ನು ಚುರುಕಾಗಿ ಓಡಿಸುವ ಸಂಕಲನ, ಡಂಕನ್ ಪಾತ್ರಧಾರಿಯ ಮುಖದಲ್ಲಿ ಎದ್ದು ಕಾಣುವ ಮರಣಭೀತಿ, ಮುಗಿಯಿತೆಂದುಕೊಂಡ ಬಿಂದುವಿನಲ್ಲೇ ಶುರುವೂ ಇರುವ ಹಾಗೆ ಶಾಕ್ ಕೊಟ್ಟು ಮುಕ್ತಾಯಗೊಳಿಸುವ ಚಿತ್ರಕಥೆಯಲ್ಲಿನ ಜಾಣ್ಮೆ ಎಲ್ಲವೂ ಸೇರಿ 'ಆಸ್ಕರ್ಸ್ ಬೆಲ್' ರೂಪುಗೊಂಡಿದೆ.

ಸಾಮಾಜಿಕ ಸಂದೇಶ ಕೊಡುವುದಾಗಲಿ, ಬದುಕಿನ ಆಳದ ಸತ್ಯಗಳನ್ನು ಧ್ವನಿಸುವ ಪ್ರತಿಮೆಗಳನ್ನು ಕಟ್ಟುವುದಾಗಲಿ ಈ ಕಿರುಚಿತ್ರದ ಉದ್ದೇಶವೇ ಅಲ್ಲ. ತೆರೆಯ ಮೇಲೆ ಚಿತ್ರ ಓಡುತ್ತಿದ್ದಷ್ಟೂ ಹೊತ್ತು ಪ್ರೇಕ್ಷಕನ ಗಮನವನ್ನು ಅತ್ತಿತ್ತ ಹಾಯಲು ಬಿಡಲಾರೆ ಎಂಬುದಷ್ಟೇ ಈ ಚಿತ್ರದ ಗುರಿ. ಅದೇ ಇದರ ಶಕ್ತಿಯೂ ಹೌದು.



**ಹೆಸರು: ಆಸ್ಕರ್ಸ್ ಬೆಲ್ (ಅಮೆರಿಕ)**
**ನಿರ್ದೇಶನ: ಕ್ರಿಸ್ ಕ್ರೊನಿನ್**
**ನಿರ್ಮಾಣ: ಜೆನೆಸಿಸ್ ಫ್ಲಸ್**
**ಸಂಗೀತ: ಕ್ರಿಪ್ಟ್ ಆಫ್ ಇನ್‌ಸೊಮೆನಿಯಾ**
**ಛಾಯಾಗ್ರಹಣ: ಸ್ಯಾಮ್ ಕ್ರೊನಿನ್**
**ಸಂಕಲನ: ಪವೆಲ್ ಪ್ರಾಕ್ಜ್**
**ತಾರಾಗಣ: ಪೌಲ್ ಬುಲಿಯನ್, ರಿಯೊ ವಾಕರ್**

ಈ ಕಿರುಚಿತ್ರ ವೀಕ್ಷಣೆಗೆ bit.ly/33WbyuH ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.